ಪ್ರಕರಣವನ್ನು ಕರೆಸಲಾಯಿತು.

ಫಿರ್ಯಾದಿ ಗೈರು ಹಾಜರು, ಫಿರ್ಯಾದಿ ಪರ ವಕೀಲರ ವಾದವನ್ನು ಆಲಿಸಲಾಯಿತು.

ಆರೋಪಿಯು 34.9 ಗ್ರಾಂ ತೂಕದ ಚಿನ್ನದ ಆಭರಣಗಳನ್ನು ದಿನಾಂಕ 13/05/2019 ರಂದು ಫಿರ್ಯಾದಿಯಲ್ಲಿ ಅಡವಿಟ್ಟು, 70,000/- ರೂಪಾಯಿಗಳ ಚಿನ್ನದ ಸಾಲವನ್ನು ಪಡೆದಿರುವನೆಂದು, ಆ ಸಮಯದಲ್ಲಿ ಚಿನ್ನದ ಒಡವೆಗಳು ತನ್ನದೆ ಎಂದು ಆರೋಪಿ ಹೇಳಿದ್ದನೆಂದು, ದೂರಿನಲ್ಲಿ ಉಲ್ಲೇಖಿಸಲಾಗಿದೆ. ಆದರೆ ದಿನಾಂಕ 15/05/2019 ರಂದು ಕೋಣನಕುಂಟೆ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರಾದ ಶ್ರೀನಿವಾಸ ಪ್ರಸಾದ ಅವರು ಪಿರ್ಯದಿ ಶಾಖೆಗೆ ಬಂದು ತಪಾಸಣೆ ಮಾಡಿ ತಮ್ಮ ಠಾಣೆಯ ಮೊ.ಸಂ. 90/2019 ರಲ್ಲಿ ಭಾ.ದಂ.ಸಂ. ಕಲಂ. 454, 457, 379 ಮತ್ತು 380 ರ ಅಪರಾಧಗಳ ಅಡಿಯಲ್ಲಿ ದಾಖಲಾದ ಪ್ರಕರಣದಲ್ಲಿ ಆರೋಪಿ ಅಡವಿಟ್ಟಿದ್ದ ಚಿನ್ನದ ಆಭರಣಗಳನ್ನು ಕಳ್ಳತನ ಮಾಡಲಾಗಿದೆ ಎಂದು ಆಪಾದಿಸಿ ಅವುಗಳನ್ನು ಜಪ್ತಿ ಮಾಡಿದ್ದಾರೆ. ಆದುದರಿಂದ ಆರೋಪಿಯು ಕಳ್ಳತನದ ಚಿನ್ನದ ಆಭರಣಗಳನ್ನು ತನ್ನ ಆಭರಣಗಳೆಂದು ನಂಬಿಸಿ 70,000/- ರೂಪಾಯಿಗಳ ಸಾಲ ಪಡೆದು, ಆ ಹಣವನ್ನು ವಾಪಾಸು ಪಾವತಿ ಮಾಡದೇ, ನಂಬಿಕೆ ದ್ರೋಹ ಮತ್ತು ವಂಚನೆ ಎಸಗಿರುವನೆಂದು, ಈ ಕುರಿತು ಸಂಬಂಧಪಟ್ಟ ಆರಕ್ಷಕರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದು, ಪೊಲೀಸ್ ಆಯುಕ್ತಕರಿಗೆ ದೂರು ನೀಡಿದ್ದರೂ ಸಹ ಪ್ರಕರಣವನ್ನು ದಾಖಲಿಸಿಲ್ಲವೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರಿನ ಪ್ರತಿಗಳನ್ನು, ಸಾಲದ ಅರ್ಜಿಯ ಪ್ರತಿಗಳನ್ನು, ಹಣ ಪಾವತಿ ರಶೀದಿಗಳನ್ನು, ಆರೋಪಿಯ ವಾಹನ ಚಾಲನಾ ಪರವಾನಿಗೆಯನ್ನು, ಫಿರ್ಯಾದಿ ನೊಂದಣಿಯಾದ ಪ್ರಮಾಣ ಪತ್ರದ ಪ್ರತಿಯನ್ನು, ಫಿರ್ಯಾದಿಯಿಂದ ದೂರು ದಾಖಲಿಸಲು ಕೊಟ್ಟಿರುವ ಅಧಿಕಾರ ಪತ್ರದ ಪ್ರತಿಯನ್ನು ಹಾಜರು ಪಡಿಸಲಾಗಿದೆ. ದೂರಿನ ಬರೆದ ಸಂಗತಿಗಳು ನಿಜವಾಗಿವೆ ಎಂದು ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ. ಈ ಎಲ್ಲ ಸಂಗತಿಗಳ ಸತ್ಯಾಂಶವನ್ನು ತಿಳಿದುಕೊಳ್ಳಲು ಸಂಬಂಧಪಟ್ಟ ಆರಕ್ಷಕ ಠಾಣೆಯ ಆರಕ್ಷಕ ಉಪನಿರೀಕ್ಷಕರಿಗೆ ನಿರ್ದೇಶಿಸುವುದು ಸಮಂಜಸವೆಂದು ನಿರ್ಧರಿಸಿ , ಕೆಳಕಂಡಂತೆ ಆದೇಶಿಸಿದೆ.

# **ಆದೇಶ**

ದಂ.ಪ್ರ.ಸಂ. ಕಲಂ. 156(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದಲ್ಲಿ ತನಿಖೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸುವಂತೆ ಬಂಡೆಪಾಳ್ಯ ಆರಕ್ಷಕ ಠಾಣೆಯ ಆರಕ್ಷಕ ಉಪನಿರೀಕ್ಷಕರಿಗೆ ನಿರ್ದೇಶಿಸಲಾಗಿದೆ.

ಅಂತಿಮ ವರದಿಗಾಗಿ ಪ್ರಕರಣವನ್ನು ದಿನಾಂಕ 12/04/2023 ಕ್ಕೆ ಮುಂದೂಡಿದೆ.

3 ನೇ ಎ.ಸಿ.ಎಮ್.ಎಮ್. ನ್ಯಾ.

ಬೆಂಗಳೂರು.